ಕರ್ನಾಟಕ ಸರ್ಕಾರ
Government of karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in
Phone - 080 26980100
Fax - 080 26422377
DSERT

ಸಂಖ್ಯೆ:ಎನ್.ಇ.ಪಿ/ಸೇ.ಬಂ.ಪ್ರ.ಅ.ಅನು/9/ಏಕ/2020–21 ದಿನಾಂಕ: 24.06.2021

**ಸುತ್ತೋಲೆ**

**ವಿಷಯ: 2021–22 ನೇ ಸಾಲಿಗೆ 1 ರಿಂದ 10 ನೇ ತರಗತಿಗಳಿಗೆ ಸೇತುಬಂಧ ಶಿಕ್ಷಣ ಅನುಷ್ಠಾನಗೊಳಿಸುವ ಬಗ್ಗೆ.**

**ಉಲ್ಲೇಖ: ಆಯುಕ್ತರ ಕಛೇರಿ ಸುತ್ತೋಲೆ ಸಂ:ಎಡಿಎಮ್(2)1ಶೈ.ವ.ನಿ–01/2021–22 ದಿ:10.06.2021**

**********

ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2021–22ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳಲ್ಲಿ ಸೇತುಬಂಧ ಶಿಕ್ಷಣವನ್ನು ಅನುಷ್ಠಾನಿಸುವ ಬಗ್ಗೆ ಉಲ್ಲೇಖಿತ ಪತ್ರದಲ್ಲಿ ತಿಳಿಸಲಾಗಿದೆ. 2020–21ನೇಸಾಲಿನಲ್ಲಿ ಕೋವಿಡ್–19ರ ಸನ್ನಿವೇಶದಿಂದ ಸೀಮಿತ ಕಲಿಕಾ ಅವಧಿ ಲಭ್ಯವಾಗಿದ್ದು, ವಿದ್ಯಾರ್ಥಿಗಳಲ್ಲಿ ಕಲಿಕಾ ಅಂತರ ಹೆಚ್ಚಾಗಿರುತ್ತದೆ. ಈ ಹಿನ್ನೆಲೆಯಲ್ಲಿ 1 ರಿಂದ 10 ನೇ ತರಗತಿಗಳಿಗೆ ಸೇತುಬಂಧ ಶಿಕ್ಷಣದ ಸಾಹಿತ್ಯ ಮತ್ತು ವಿನ್ಯಾಸವನ್ನು ಸಿದ್ಧಪಡಿಸಲಾಗಿದೆ. ಈ ಸಾಹಿತ್ಯವನ್ನು ಶಿಕ್ಷಕರ ಸಾಮರ್ಥ್ಯ ಅಭಿವೃದ್ಧಿಗಾಗಿ ಸಿದ್ಧಪಡಿಸಿದ್ದು ಶಾಲಾ ಹಂತದಲ್ಲಿ ಸೇತುಬಂಧ ಶಿಕ್ಷಣವನ್ನು ಅನುಷ್ಠಾನಿಸಲು ಸಹಕಾರಿಯಾಗುವಂತೆ ಬಿಡುಗಡೆ ಮಾಡಿದೆ. ಈ ಸಾಹಿತ್ಯದಿಂದ ಪಡೆದ ಅನುಭವಗಳನ್ನು ಆಧರಿಸಿ **ಆನ್‌ಲೈನ್ ಅಥವಾ ಆಫ್‌ಲೈನ್** ಸ್ವರೂಪದಲ್ಲಿ ಸೇತುಬಂಧವನ್ನು ಆಯೋಜಿಸುವುದು.

**ನಲಿಕಲಿ ಬೋಧನಾ ಕಲಿಕಾ ಪದ್ಧತಿಯ ಸೇತುಬಂಧ ಶಿಕ್ಷಣದ ಅನುಷ್ಠಾನ ಕಾರ್ಯತಂತ್ರಗಳು:**

ಕೋವಿಡ್ ಸಾಂಕ್ರಾಮಿಕ ಸನ್ನಿವೇಶದ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳ ಕನ್ನಡ ಮಾಧ್ಯಮದ 01 ರಿಂದ 03ನೇ ತರಗತಿ ಹಾಗೂ ಉರ್ದು ಮಾಧ್ಯಮದ 01 ರಿಂದ 02ನೇ ತರಗತಿವರೆಗಿನ ಕಲಿಕೆಯನ್ನು ನಲಿಕಲಿ ಬೋಧನಾ ಕಲಿಕಾ ಪದ್ಧತಿಯ ಮಾದರಿಯಲ್ಲಿ ಅನುಷ್ಠಾನಿಸಲು ಸಾಧ್ಯವಾಗುತ್ತಿಲ್ಲ. ಹಾಗೆಯೇ, ಶಾಲೆಯ ಹೊರತಾಗಿ ಅನೌಪಚಾರಿಕ ಸನ್ನಿವೇಶದಲ್ಲಿ ಬಹುಹಂತದ ಕಲಿಕೆಯನ್ನು ಸೂಕ್ತವಾಗಿ ಅಳವಡಿಸಲು ಮತ್ತು ಅನುಪಾಲನೆಗೊಳಿಸಲು ಸಹ ಸಾಧ್ಯವಿರುವುದಿಲ್ಲ. ಸದರಿ ಕಲಿಕಾ ಪದ್ಧತಿಯ ನಿಯಮಕ್ಕೆ ಪೂರಕವಾಗಿ ಪ್ರಸ್ತುತ ಪರಿಸ್ಥಿತಿಯು ಸಕಾರಾತ್ಮಕವಾಗಿ ಇಲ್ಲದಿರುವುದರಿಂದ ಸದರಿ ಕಲಿಕಾ ಪದ್ಧತಿಯಲ್ಲಿ ಅಗತ್ಯ ಮಾರ್ಪಾಡುಗಳನ್ನು ಮಾಡಿಕೊಳ್ಳಲಾಗಿದ್ದು, ಸೇತುಬಂಧ ಕಲಿಕೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರಮುಖ ಅಂಶಗಳು ಹೀಗಿವೆ.

**ಅ) ಸೇತುಬಂಧ ಕಲಿಕಾ ಮಾದರಿಯನ್ನು ಅನುಷ್ಠಾನಗೊಳಿಸಲು ಮಾರ್ಗದರ್ಶಿತ ಅಂಶಗಳು:**

- ✓ ಕನ್ನಡ ಮತ್ತು ಉರ್ದು ಮಾಧ್ಯಮದ ನಲಿಕಲಿ ತರಗತಿಗಳಲ್ಲಿ ಸೇತುಬಂಧ ಕಲಿಕೆಗಾಗಿ ಒಟ್ಟು 60 ದಿನಗಳನ್ನು ನಿಗದಿಪಡಿಸಲಾಗಿದೆ. **(ಜುಲೈ–01 ರಿಂದ ಆಗಸ್ಟ್–31ರವರೆಗೆ)**
- ✓ ಒಂದನೇ ತರಗತಿಗೆ ಸಂಬಂಧಿಸಿದಂತೆ, ಸೇತುಬಂಧ ಕಲಿಕೆಗೆ ನಿರ್ದಿಷ್ಟ ದಿನಗಳ ಅವಧಿಗಳು ಪ್ರತ್ಯೇಕವಾಗಿ ಇರದೇ, ಶಾಲೆಯು ಪ್ರಾರಂಭವಾದ ದಿನದಿಂದಲೇ ವರ್ಷಾಂತ್ಯದವರೆಗೂ ಕಲಿಕೆಯು ನಿರಂತರವಾಗಿ ಸಾಗುತ್ತದೆ. **(ಇಂಗ್ಲೀಷ್ ಭಾಷೆಯ ವಿಷಯವನ್ನೂ ಸೇರಿಸಿಕೊಂಡು)**
- ✓ ಕನ್ನಡ ಮಾಧ್ಯಮದ 02 ಮತ್ತು 03ನೇ ತರಗತಿ ಹಾಗೂ ಉರ್ದು ಮಾಧ್ಯಮದ 02ನೇ ತರಗತಿ ಕಲಿಕೆಗೆ ಸೇತುಬಂಧ ಕಲಿಕಾ ಚಟುವಟಿಕೆಗಳನ್ನು ಪ್ರತ್ಯೇಕವಾಗಿ ತರಗತಿವಾರು, ವಿಷಯವಾರು 60 ದಿನಗಳಿಗೆ ಸಿದ್ಧಪಡಿಸಲಾಗಿದೆ. ಈ ಕಲಿಕೆಯಲ್ಲಿ ಹಿಂದಿನ ತರಗತಿಯ ಕಲಿಕೆಗೆ ಸಂಬಂಧಿಸಿದ ಬುನಾದಿ ಸಾಮರ್ಥ್ಯಗಳನ್ನು ಅಥವಾ ಅಗತ್ಯ ಕಲಿಕಾಂಶದ ಪರಿಕಲ್ಪನೆಗಳನ್ನು ಒರೆ ಹಚ್ಚುವ ಹಾಗೂ ಹೆಚ್ಚಿನ ಕಲಿಕೆಗೆ ಪ್ರೇರೇಪಿಸುವ ಸ್ವಕಲಿಕಾ ಆಧಾರಿತ ಚಟುವಟಿಕೆಗಳನ್ನೂ ಸಹ ಸಿದ್ಧಪಡಿಸಲಾಗಿರುತ್ತದೆ.
- ✓ ತರಗತಿವಾರು, ವಿಷಯವಾರು ನಿಗದಿಪಡಿಸಿದ 60 ದಿನಗಳ ಸೇತುಬಂಧ ಪಠ್ಯವಸ್ತುವಿನ ಮಾದರಿಯನ್ನು **'ಸಮಗ್ರ ಶಿಕ್ಷಣ ಕರ್ನಾಟಕದ ನಲಿಕಲಿ ಕೋಶದ'** ವತಿಯಿಂದಲೇ ನೀಡಲಾಗುವುದು. ಎಲ್ಲಾ ಜಿಲ್ಲೆಗಳು ಸೇತುಬಂಧ ಮಾದರಿಯನ್ನು ಯಥಾವತ್ತಾಗಿ ಅನುಷ್ಠಾನಗೊಳಿಸತಕ್ಕದ್ದು. (ಅನುಬಂಧಿಸಿದೆ)
- ✓ ಸೇತುಬಂಧದ ಮಾದರಿಯಲ್ಲಿ ತರಗತಿವಾರು, ವಿಷಯವಾರು, ದಿನವಾರು ಕಲಿಕೆಯ ಅಂಶಗಳನ್ನು ಮತ್ತು ಸೂಕ್ತ ಕಲಿಕಾ ಸಾಮಗ್ರಿಗಳನ್ನು ಹಾಗೂ ಮೌಲ್ಯಮಾಪನದ ವಿಧಾನಗಳನ್ನು ಸಹ ಮ್ಯಾಪಿಂಗ್ ಮಾಡಲಾಗಿದ್ದು, ನಲಿಕಲಿ

ಘಟಕದ ಶಿಕ್ಷಕರು ವಿಷಯವಾರು ಸೇತುಬಂಧ ಮಾದರಿಯ ಅನುಷ್ಠಾನಕ್ಕೆ ಬೇಕಾಗಿರುವಂತೆ ಕಲಿಕಾ ಚಟುವಟಿಕೆಗಳಿಗೆ ಪೂರಕ ಸಿದ್ಧತೆಗಳನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.

✓ ದ್ವಿತೀಯ ಭಾಷೆ ಇಂಗ್ಲಿಷ್ ವಿಷಯದಲ್ಲಿಯೂ ನಲಿಕಲಿ ಘಟಕಗಳಿಗೆ ಸಮಗ್ರ ಶಿಕ್ಷಣ ಕರ್ನಾಟಕದ ವತಿಯಿಂದ ಒದಗಿಸಲಾದ ಸೇತುಬಂಧ ಕಲಿಕಾ ಮಾದರಿಯನ್ನು ಎಲ್ಲಾ ಜಿಲ್ಲೆಗಳು ಕಡ್ಡಾಯವಾಗಿ ಅನುಸರಿಸತಕ್ಕದ್ದು.

✓ ಒಂದನೇ ತರಗತಿಯ ಮಕ್ಕಳಿಗೆ ಇಂಗ್ಲಿಷ್ ಭಾಷೆಗೆ ಸಂಬಂಧಿಸಿದಂತೆ ಇ.ಎನ್.ಕೆ(ENK) ಪಠ್ಯವಸ್ತುವಿನ ಕಲಿಕೆಯು ಶಾಲೆ ಪ್ರಾರಂಭದ ದಿನದಿಂದ ವರ್ಷಾಂತ್ಯದವರೆಗೂ ನಿರಂತರವಾಗಿ ಸಾಗುತ್ತದೆ.

✓ ಎರಡನೇ ತರಗತಿಯ ಮಕ್ಕಳಿಗೆ ಇಂಗ್ಲಿಷ್ ಭಾಷೆಗೆ ಸಂಬಂಧಿಸಿದಂತೆ ಇ.ಎನ್.ಕೆ (ENK) ಲೆವೆಲ್-01ರ ಕಲಿಕಾಂಶವನ್ನು ಹಾಗೂ ಮೂರನೇ ತರಗತಿಯ ಮಕ್ಕಳಿಗೆ ಕೆ.ಟಿ.ಬಿ.ಎಸ್. ವತಿಯಿಂದ ಒದಗಿಸಿದ 02ನೇ ತರಗತಿಯ ಪಠ್ಯಾಂಶ ಅಂದರೆ **'ರೀಡರ್ ಕಮ್ ಆಕ್ಟಿವಿಟಿ ಪುಸ್ತಕವು'** ಒಳಗೊಂಡಿರುವ ಕಲಿಕಾಂಶವನ್ನು ಆಧರಿಸಿ 60 ದಿನಗಳಿಗೆ ಸೇತುಬಂಧದ ಕಲಿಕೆಯನ್ನು ವಿನ್ಯಾಸಗೊಳಿಸಿದ್ದು, ಇದರಂತೆ ಅನುಷ್ಠಾನಗೊಳಿಸತಕ್ಕದ್ದು.

**ಆ) ಮೌಲ್ಯಮಾಪನ ಕ್ರಮ ಮತ್ತು ದಾಖಲೆ ನಿರ್ವಹಣೆ ಕುರಿತ ಮಾರ್ಗದರ್ಶಿತ ಅಂಶಗಳು:**

- ಸೇತುಬಂಧ ಕಲಿಕೆಯಲ್ಲಿ ಅಂದರೆ, 60 ದಿನಗಳ ಕಲಿಕಾ ಮಾದರಿ ಪ್ರಕ್ರಿಯೆಯಲ್ಲಿ ಒಟ್ಟು 04 ಮೌಲ್ಯಮಾಪನದ ಹಂತಗಳನ್ನು ಗುರುತಿಸಿಕೊಳ್ಳಲಾಗಿದೆ. ಅವುಗಳನ್ನು 15 ದಿನ, 30 ದಿನ, 45 ದಿನ ಹಾಗೂ 60 ದಿನಗಳ ನಂತರ ಕಡ್ಡಾಯವಾಗಿ ಅನುಷ್ಠಾನಿಸುವುದು. ಈ ಸಂದರ್ಭದಲ್ಲಿ ಮೌಲ್ಯಮಾಪನಕ್ಕೆ ಪೂರಕವಾಗಿರುವ ಕಲಿಕಾ ಅಭ್ಯಾಸದ ಹಾಳೆಗಳನ್ನು ಬಳಸುವುದು.
- ದ್ವಿತೀಯ ಭಾಷೆ ಇಂಗ್ಲಿಷ್ ವಿಷಯದ ಕಲಿಕೆಗೂ ಸಹ 04 ಮೌಲ್ಯಮಾಪನದ ಹಂತಗಳನ್ನು ಗುರುತಿಸಿಕೊಳ್ಳಲಾಗಿದ್ದು, ಕಲಿಕಾ ಮಾದರಿಯಲ್ಲಿನ ಸೂಚನೆಯಂತೆ ಅನುಷ್ಠಾನಿಸುವುದು.
- ಪ್ರತೀ ಮೌಲ್ಯಮಾಪನದ ಹಂತದಲ್ಲಿ ಕಲಿಕೆಯನ್ನು ಒರೆ ಹಚ್ಚಲು ವಿದ್ಯಾರ್ಥಿಗಳ ಮನೆಗೆ ಪೂರಕ ಅಭ್ಯಾಸ/ಚಟುವಟಿಕಾ ಹಾಳೆಗಳನ್ನು **ಆನ್ಲೈನ್ ಅಥವಾ ಆಫ್ಲೈನ್** ಮಾಧ್ಯಮ ಬಳಸಿ ತಲುಪಿಸುವುದು. ವಿದ್ಯಾರ್ಥಿಗಳು ಅವುಗಳನ್ನು ಪೂರ್ಣಗೊಳಿಸಿದ ನಂತರ ಮರಳಿ ಪಡೆದು, ಮಕ್ಕಳ ಕಲಿಕೆಯ ಸಾಧನೆಯನ್ನು ಮೌಲ್ಯಮಾಪನಕ್ಕೆ ಒಳಪಡಿಸುವುದು. ಮೌಲ್ಯಮಾಪನ ಅಂಶಗಳನ್ನು ಆಧರಿಸಿ ಪೂರಕ ಹಿಮ್ಮಾಹಿತಿ ನೀಡುವ ಮೂಲಕ ವಿದ್ಯಾರ್ಥಿಗಳ ಕಲಿಕೆಯನ್ನು ನಿರ್ದಿಷ್ಟ ಉದ್ದೇಶದ ಕಡೆಗೆ ಪ್ರೇರೇಪಿಸುವಂತೆ ನೋಡಿಕೊಳ್ಳುವುದು.
- ಕಲಿಕೆಯ ಮೌಲ್ಯಮಾಪನಕ್ಕಾಗಿ ಬಳಸಲಾದ ಅಭ್ಯಾಸದ ಹಾಳೆಗಳನ್ನು ಮರಳಿ ಪಡೆದ ನಂತರ **ಪೂರ್ಣ ಸರಿ ಉತ್ತರ ಇದ್ದರೆ 'ಎ' ಎಂದೂ, ತಪ್ಪಾದ ಉತ್ತರ ಇದ್ದರೆ 'ಬಿ' ಎಂದೂ ಶ್ರೇಣಿಗಳನ್ನು ನೀಡುವುದು.'ಬಿ'** ಶ್ರೇಣಿ ಪಡೆದ ವಿದ್ಯಾರ್ಥಿಗಳಿಗೆ ಸೂಕ್ತ ಹಿಮ್ಮಾಹಿತಿ ನೀಡುವ ಮೂಲಕ ಪೂರಕ ಚಟುವಟಿಕೆಗಳನ್ನು ಮಾಡಿಸಿ ಕಲಿಕಾ ಕೊರತೆಯನ್ನು ನೀಗಿಸುವುದು.
- ಒಂದು ವೇಳೆ ಮೌಲ್ಯಮಾಪನಕ್ಕೆ ಅಂಕವನ್ನು ಪರಿಗಣಿಸಿದ್ದಲ್ಲಿ, ಸರಾಸರಿ ಸಾಧನೆ ಆಧರಿಸಿ ಆ ಅಂಕಗಳನ್ನು ಅವಲೋಕಿಸಿ 'ಎ' ಅಥವಾ 'ಬಿ' ಶ್ರೇಣಿಗಳಿಗೆ ಪರಿವರ್ತಿಸುವುದು. ಹಾಗೆಯೇ ಶ್ರೇಣಿಗಳನ್ನು ಮೌಲ್ಯಮಾಪನ ವಹಿಯಲ್ಲಿ ವಿದ್ಯಾರ್ಥಿವಾರು ದಾಖಲಿಸಿಕೊಳ್ಳುವುದು. ಮಕ್ಕಳು ಮಾಡಿದ ಅಭ್ಯಾಸದ ಹಾಳೆಗಳನ್ನು ಮಕ್ಕಳ ಪೋರ್ಟ್ ಪೋಲಿಯೋದಲ್ಲಿ ಸಂಗ್ರಹಿಸಿಟ್ಟುಕೊಳ್ಳುವುದು.
- ಮೌಲ್ಯಮಾಪನ ದಾಖಲೆಗಳ ನಿರ್ವಹಣೆ ಅತ್ಯಗತ್ಯವಾಗಿದ್ದು, ಯಾವುದೇ ಸಂದರ್ಭದಲ್ಲಿ, ಯಾವುದೇ ಹಂತದ ಮೇಲಾಧಿಕಾರಿಗಳು ದಾಖಲೆ ನಿರ್ವಹಣಾ ಕ್ರಮವನ್ನು ಅನುಪಾಲನೆಗೆ ಒಳಪಡಿಸುವ ಸಾಧ್ಯತೆ ಇರುತ್ತದೆ ಎಂಬುದನ್ನು ಶಾಲೆಗಳ ಗಮನಕ್ಕೆ ತರುವುದು.
- ಸೇತುಬಂಧ ಕಲಿಕೆಗೆ ನಿರ್ದಿಷ್ಟಪಡಿಸಿದ ಕಲಿಕೆಯ ದಿನಗಳು ಪೂರ್ಣಗೊಂಡ ನಂತರ, ಪ್ರತೀ ಮಗುವೂ ತರಗತಿವಾರು ನಿರ್ದಿಷ್ಟಪಡಿಸಿದ **ಪ್ರಸಕ್ತ ಸಾಲಿನ ಪಠ್ಯ ಕಲಿಕೆಗೆ ಪ್ರವೇಶ ಪಡೆದುಕೊಳ್ಳುತ್ತದೆ.** ಇದಕ್ಕೆ ಸಂಬಂಧಿಸಿದ ಪಾಠ ಹಂಚಿಕೆಯ ವಿವರ ಮತ್ತು ಮೌಲ್ಯಮಾಪನ ಕ್ರಮದ ಅನುಸರಣೆಯ ವಿಧಾನಗಳನ್ನು ಮುಂದಿನ ಸುತ್ತೋಲೆಯಲ್ಲಿ ಸವಿವರವಾದ ಮಾಹಿತಿಯೊಂದಿಗೆ ನೀಡಲಾಗುವುದು.

**ಇ) ಮೌಲ್ಯ ಮಾಪನ ದಾಖಲೆಗಳ ದಾಖಲೀಕರಣ ಕುರಿತ ಮಾರ್ಗದರ್ಶಿತ ಅಂಶಗಳು:**

| ಕ್ರಸಂ | ವಿದ್ಯಾರ್ಥಿ ಹೆಸರು | 15 ದಿನಗಳ ನಂತರ | | | | 30 ದಿನಗಳ ನಂತರ | | | | 45 ದಿನಗಳ ನಂತರ | | | | 60 ದಿನಗಳ ನಂತರ | | | | ಒಟ್ಟು | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ಕನ್ನಡ | ಇಂಗ್ಲೀಷ್ | ಗಣಿತ | ಪ.ಅಧ್ಯಯನ | ಕನ್ನಡ | ಇಂಗ್ಲೀಷ್ | ಗಣಿತ | ಪ.ಅಧ್ಯಯನ | ಕನ್ನಡ | ಇಂಗ್ಲೀಷ್ | ಗಣಿತ | ಪ.ಅಧ್ಯಯನ | ಕನ್ನಡ | ಇಂಗ್ಲೀಷ್ | ಗಣಿತ | ಪ.ಅಧ್ಯಯನ | ಕನ್ನಡ | ಇಂಗ್ಲೀಷ್ | ಗಣಿತ | ಪ.ಅಧ್ಯಯನ | ಷರಾ |
| | | | | | | | | | | | | | | | | | | | | | | |

**ಈ) ಅಭ್ಯಾಸ/ ಚಟುವಟಿಕಾ ಹಾಳೆಗಳ ವಿನ್ಯಾಸ ಮತ್ತು ಬಳಕೆ ಕುರಿತ ಮಾರ್ಗದರ್ಶಿತ ಅಂಶಗಳು:**

- 60 ದಿನಗಳ ನಲಿಕಲಿ ಸೇತುಬಂಧ ಕಲಿಕಾ ಮಾದರಿಗೆ ಪೂರಕವಾಗಿ ವಿಷಯವಾರು, ತರಗತಿವಾರು ಅಗತ್ಯವಿರುವ ಸ್ವಕಲಿಕಾ ಆಧಾರಿತ ಚಟುವಟಿಕೆ/ಅಭ್ಯಾಸದ ಹಾಳೆಗಳನ್ನು ರಾಜ್ಯ ನಲಿಕಲಿ ಸಂಪನ್ಮೂಲ ವ್ಯಕ್ತಿಗಳ ನೆರವಿನೊಂದಿಗೆ ವಿನ್ಯಾಸಗೊಳಿಸಲಾಗಿದ್ದು, ಸೇತುಬಂಧ ಮಾದರಿಯೊಂದಿಗೆ ಅನುಬಂಧಿಸಿ ತಲುಪಿಸಲಾಗುವುದು.
- ಪ್ರತೀ ಮಗುವೂ ವಿನ್ಯಾಸಗೊಳಿಸಿದ ಅಭ್ಯಾಸದ ಹಾಳೆಗಳನ್ನು(Work Sheet) ಬಳಸುವುದು ಕಡ್ಡಾಯವಾಗಿರುತ್ತದೆ. ಸೃಜನಾತ್ಮಕ ಅಭ್ಯಾಸದ ಹಾಳೆಗಳ ಅಗತ್ಯತೆ ಕಂಡುಬಂದಲ್ಲಿ ವಿಷಯವಾರು ಶಿಕ್ಷಕರು ಸ್ಥಳೀಯ ಅವಶ್ಯಕತೆ ಹಾಗೂ ಲಭ್ಯಸಂಪನ್ಮೂಲಗಳನ್ನು ಆಧರಿಸಿಕ್ರಿಯಾಶೀಲವಾಗಿ ರೂಪಿಸಿ ಬಳಸಬಹುದಾಗಿದೆ.
- **ಪ್ರತೀ ಶಾಲೆಯು ತಮ್ಮಲ್ಲಿ ಲಭ್ಯವಿರುವ ಶಾಲಾನುದಾನದಿಂದಲೇ ಚಟುವಟಿಕೆ/ಅಭ್ಯಾಸದ ಹಾಳೆಗಳನ್ನು ಜೆರಾಕ್ಸ್ ಮಾಡಿಸುವ ಮೂಲಕ ಮಕ್ಕಳಿಗೆ ಒದಗಿಸಲು ಕ್ರಮವಹಿಸತಕ್ಕದ್ದು.**
- ವಿನ್ಯಾಸಗೊಳಿಸಲಾದ ಅಭ್ಯಾಸ/ಚಟುವಟಿಕೆಯ ಹಾಳೆಗಳನ್ನು **ಆನ್‌ಲೈನ್ ಹಾಗೂ ಆಫ್ಲೈನ್** ಮೂಲಕವೂ ಮಕ್ಕಳಿಗೆ ತಲುಪಿಸಬಹುದಾಗಿರುತ್ತದೆ. ಅಭ್ಯಾಸದ ಹಾಳೆಗಳ ಬಳಕೆಯ ಸಂದರ್ಭದಲ್ಲಿ ಮಕ್ಕಳ ಕಲಿಕೆಗೆ ನೆರವು ನೀಡಲು ಅಗತ್ಯವಿರುವ ಸೂಚನೆ/ಮಾರ್ಗದರ್ಶನಗಳನ್ನು ಸಹ ಪೋಷಕರಿಗೂ ಸ್ಪಷ್ಟಪಡಿಸುವುದು ಅಗತ್ಯವಿದೆ. ಸದರಿ ಅಭ್ಯಾಸ ಹಾಳೆಗಳನ್ನು ಮಕ್ಕಳಿಗೆ ನೀಡಿರುವ ಮತ್ತು ಹಿಂಪಡೆದಿರುವ ಬಗ್ಗೆ ಸೂಕ್ತ ದಾಖಲೆಯನ್ನು ಶಿಕ್ಷಕರು ನಿರ್ವಹಿಸತಕ್ಕದ್ದು.
- ಕೆಲವು ಅಭ್ಯಾಸದ ಹಾಳೆಗಳಲ್ಲಿ ***QR CODE***ಅಳವಡಿಸಿದ್ದು, ವಿಡಿಯೋ ಮತ್ತು ಆಡಿಯೋಗಳನ್ನು ಉಪಯೋಗಿಸಿ ಮಕ್ಕಳು ಹೆಚ್ಚಿನ ಕಲಿಕಾ ಅನುಭವ ಪಡೆಯಲು ಅವಕಾಶಗಳನ್ನು ಕಲ್ಪಿಸಲಾಗಿದೆ. ಹಾಗೆಯೇ, ಇಲಾಖೆಯಿಂದ ಪ್ರಸಾರಕ್ಕೆ ಕ್ರಮವಹಿಸಿದ ರೇಡಿಯೋ/ದೂರದರ್ಶನ ಪಾಠ ಪ್ರಸಾರದ ಬಳಕೆಗೂ ಇದು ನೆರವು ನೀಡುವ ಸಾಧ್ಯತೆಯನ್ನು ಹೊಂದಿದೆ. ಈ ತಂತ್ರಗಾರಿಕೆ ಮಕ್ಕಳ ಕಲಿಕೆಯನ್ನು ಸಾಧ್ಯವಾದಷ್ಟು ಪರಿಣಾಮಕಾರಿಗೊಳಿಸಲು ಮತ್ತು ಏಕತಾನತೆಯನ್ನು ನೀಗಿಸಲು ಸಹಕಾರಿಯಾಗಬಲ್ಲದು. ಕ್ಯು.ಆರ್.ಕೋಡ್ ಸ್ಕ್ಯಾನ್ ಮಾಡುವ ಬಗ್ಗೆ ಪೋಷಕರಿಗೆ ಅಥವಾ ಮಕ್ಕಳ ಮನೆಯಲ್ಲಿನ ಸುಗಮಕಾರರಿಗೆ ಆನ್ಲೈನ್/ದೂರವಾಣಿ ಕರೆಗಳ ಮೂಲಕ ಅಗತ್ಯ ಮಾರ್ಗದರ್ಶನ ನೀಡುವುದು.

**ಉ) ನಲಿಕಲಿ ಸೇತುಬಂಧ ಅನುಷ್ಠಾನಕ್ಕೆ ಪೂರಕವಾಗಿ ಜಿಲ್ಲಾ ಹಂತದ ಅಧಿಕಾರಿಗಳ ಕರ್ತವ್ಯಗಳು:**

- 60 ದಿನಗಳ ನಲಿಕಲಿ ಸೇತುಬಂಧ ಕಲಿಕಾ ಮಾದರಿಯನ್ನು ಎಲ್ಲಾ ತಾಲ್ಲೂಕುಗಳ ಶಾಲೆಗಳಲ್ಲಿ ಕಡ್ಡಾಯವಾಗಿ ಅನುಷ್ಠಾನಗೊಳಿಸುವಂತೆ ಅಗತ್ಯ ಕ್ರಮವಹಿಸತಕ್ಕದ್ದು.
- 60 ದಿನಗಳ ಸೇತುಬಂಧ ಕಲಿಕಾ ಮಾದರಿಯ ಮಾರ್ಗದರ್ಶನ ಮತ್ತು ಅನುಷ್ಠಾನಕ್ಕೆ ಪೂರಕವಾಗಿ ಉಪನಿರ್ದೇಶಕರು ಆಡಳಿತ ಮತ್ತು ಅಭಿವೃದ್ಧಿ ಹಾಗೂ ನಲಿಕಲಿ ನೋಡಲ್ ಅಧಿಕಾರಿಗಳು ಮತ್ತು ಜಿಲ್ಲಾ ಉಪಸಮನ್ವಯಾಧಿಕಾರಿಗಳ ಇವರ ನೇತೃತ್ವದಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿನ ಎಲ್ಲಾ ತಾಲ್ಲೂಕೂಗಳ ಬಿ.ಆರ್.ಸಿ ಮತ್ತು ಬಿ.ಆರ್.ಪಿಗಳೊಂದಿಗೆ ಗೂಗಲ್/ಜೂಮ್/ವೀಡಿಯೋ ಮಾಧ್ಯಮ ಆಧಾರಿತ ಸಭೆಯನ್ನು ಆಯೋಜಿಸಿ ಮಾರ್ಗದರ್ಶನಕ್ಕೆ ಕ್ರಮವಹಿಸತಕ್ಕದ್ದು.
- ಮೌಲ್ಯಮಾಪನ ದಾಖಲೆ ನಿರ್ವಹಣೆ ಕುರಿತಂತೆ ಶಾಲೆಗಳು ನಿರ್ವಹಿಸಿರುವ ದಾಖಲೆಯ ಕ್ರಮಗಳನ್ನು ಮೇಲುಸ್ತುವಾರಿ ಮತ್ತು ಅಗತ್ಯ ಅನುಪಾಲನೆಗೆ ಕ್ರಮವಹಿಸತಕ್ಕದ್ದು.

- ಆನ್ಲೈನ್ ಅಥವಾ ಆಫ್‌ಲೈನ್ ಮಾದರಿಯ ಕಲಿಕೆಗೆ ಶಾಲೆಗಳು ವಹಿಸಿರುವ ಅಗತ್ಯ ಕ್ರಮಗಳನ್ನು ಮತ್ತು ಅನುಸರಿಸಿರುವ ಕೋವಿಡ್ ಮುನ್ನೆಚ್ಚರಿಕಾ ಕ್ರಮಗಳ ಅನುಸರಣೆ ಬಗ್ಗೆ ಶಾಲಾ ಭೇಟಿ ವರದಿಗಳನ್ನು ಮೌಲ್ಯಮಾಪನಗೊಳಿಸುವುದು.

**ಊ) ನಲಿಕಲಿ ಸೇತುಬಂಧ ಅನುಷ್ಠಾನಕ್ಕೆ ಪೂರಕವಾಗಿ ತಾಲ್ಲೂಕು ಹಂತದ ಅಧಿಕಾರಿಗಳ ಕರ್ತವ್ಯಗಳು**

- 60 ದಿನಗಳ ನಲಿಕಲಿ ಸೇತುಬಂಧ ಕಲಿಕಾ ಮಾದರಿಯನ್ನು ಎಲ್ಲಾ ಶಾಲೆಗಳಲ್ಲಿ ಕಡ್ಡಾಯವಾಗಿ ಅನುಷ್ಠಾನಗೊಳಿಸಿ, ಸಕಾಲಕ್ಕೆ ಅನುಪಾಲನೆಗೆ ಒಳಪಡಿಸಲು ಅಗತ್ಯ ಕ್ರಮಗಳನ್ನು ರೂಪಿಸತಕ್ಕದ್ದು.
- 60 ದಿನಗಳ ಸೇತುಬಂಧ ಕಲಿಕಾ ಮಾದರಿಯ ಮಾರ್ಗದರ್ಶನ ಮತ್ತು ಅನುಷ್ಠಾನಕ್ಕೆ ಪೂರಕವಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಮತ್ತು ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳ ನೇತೃತ್ವದಲ್ಲಿ ತಾಲ್ಲೂಕು ವ್ಯಾಪ್ತಿಯಲ್ಲಿನ ಎಲ್ಲಾ ಇ.ಸಿ.ಓ. ಬಿ.ಆರ್.ಪಿ ಮತ್ತು ಸಿ.ಆರ್.ಪಿಗಳೊಂದಿಗೆ ಗೂಗಲ್/ಜೂಮ್/ವೀಡಿಯೋ ಮಾಧ್ಯಮ ಆಧಾರಿತ ಸಭೆಯನ್ನು ಆಯೋಜಿಸಿ ಮಾರ್ಗದರ್ಶನಕ್ಕೆ ಕ್ರಮವಹಿಸತಕ್ಕದ್ದು.
- ಮಕ್ಕಳ ಕಲಿಕೆಗೆ ಅಗತ್ಯವಿರುವಂತೆ ಆನ್ಲೈನ್/ಆಫ್ಲೈನ್ ಮಾದರಿಯಲ್ಲಿ ವಿನ್ಯಾಸಗೊಳಿಸಿದ ಅಭ್ಯಾಸದ ಹಾಳೆಗಳ ಬಳಕೆಯ ಬಗ್ಗೆ ಶಿಕ್ಷಕರಿಗೆ ಕ್ಲಸ್ಟರ್ ಹಂತದಲ್ಲಿ ಗೂಗಲ್/ಜೂಮ್/ವೀಡಿಯೋ ಮಾಧ್ಯಮ ಆಧಾರಿತ ಸಭೆಯನ್ನು ಸಿ.ಆರ್.ಪಿ.ಗಳು ಆಯೋಜಿಸಿ ಮಾರ್ಗದರ್ಶನಕ್ಕೆ ಕ್ರಮವಹಿಸತಕ್ಕದ್ದು.
- ಸಮಗ್ರ ಶಿಕ್ಷಣ ಕರ್ನಾಟಕದ ವತಿಯಿಂದ ತರಗತಿವಾರು ಮತ್ತು ವಿಷಯವಾರು ವಿನ್ಯಾಸಗೊಳಿಸಿದ ಅಭ್ಯಾಸ ಹಾಳೆಗಳ ಲಭ್ಯತೆಗೆ ಶಾಲೆಗಳ ಮುಖ್ಯ ಶಿಕ್ಷಕರು ಶಾಲಾನುದಾನವನ್ನು ಬಳಸಿಕೊಳ್ಳಲು ಅಗತ್ಯ ಕ್ರಮವಹಿಸತಕ್ಕದ್ದು.
- ಮಕ್ಕಳ ಕಲಿಕಾ ಪ್ರಗತಿ ಹಾಗೂ ನಿರಂತರ ಕಲಿಕೆ ಕುರಿತಂತೆ ಮೌಲ್ಯಮಾಪನ ದಾಖಲೆ ನಿರ್ವಹಣೆ ಬಗ್ಗೆ ಪ್ರತೀ ಶಾಲೆಯು ಕೈಗೊಂಡಿರುವ ಕ್ರಮಗಳನ್ನು ಶಾಲಾ ಭೇಟಿ ಮೂಲಕ ಮೇಲ್ವಿಚಾರಣೆಗೆ ಒಳಪಡಿಸತಕ್ಕದ್ದು.
- ಶಾಲಾ ಭೇಟಿಯ ಸಂದರ್ಭದಲ್ಲಿ ಎಲ್ಲಾ ಶಾಲೆಗಳು ಕೋವಿಡ್ ಮುನ್ನೆಚ್ಚರಿಕಾ ಕ್ರಮಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಪರಿಶೀಲಿಸಿ ಖಾತ್ರಿಪಡಿಸಿಕೊಳ್ಳತಕ್ಕದ್ದು ಹಾಗೂ ಪ್ರತೀ ಶಾಲೆಯೂ ನಲಿಕಲಿ ಸೇತುಬಂಧ ಕಲಿಕಾ ಮಾದರಿಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ತಾಲ್ಲೂಕು ಹಂತದಲ್ಲಿ ಅಗತ್ಯ ಕಾರ್ಯತಂತ್ರಗಳನ್ನು ರೂಪಿಸತಕ್ಕದ್ದು.

**ಋ) ದ್ವಿಭಾಷಾ (ಬೈಲಿಂಗ್ವಲ್) ಬೋಧನಾ ಕಲಿಕಾ ಪದ್ಧತಿಯ ಸೇತುಬಂಧ ಶಿಕ್ಷಣದ ಅನುಷ್ಠಾನ**

'ದ್ವಿಭಾಷೆ (ಬೈಲಿಂಗ್ವಲ್)'ವ್ಯವಸ್ಥೆಗೆ ಒಳಪಡುವ ಬೋಧನಾ ಕಲಿಕಾ ಪದ್ಧತಿಯ ಅನುಷ್ಠಾನದಲ್ಲಿ ಸೇತುಬಂಧ ಕಲಿಕೆಗಾಗಿ 45 ದಿನಗಳನ್ನು ಮಾತ್ರ ನಿಗದಿಪಡಿಸಲಾಗಿದೆ.ಸದರಿ ದಿನಗಳ ಕಲಿಕೆಯಲ್ಲಿಪ್ರಸ್ತುತ03 ಹಂತದಲ್ಲಿ ಮೌಲ್ಯಮಾಪನದ ಹಂತವನ್ನುಗುರುತಿಸಲಾಗಿದೆ.ಸೇತುಬಂಧದ ಪಠ್ಯ ವಿನ್ಯಾಸದ ಮಾದರಿಯನ್ನು ಇಲಾಖೆ ವತಿಯಿಂದಲೇಎಲ್ಲಾ ಜಿಲ್ಲೆಗಳಿಗೂ ತಲುಪಿಸಲಾಗುವುದು.ಸದರಿಮಾದರಿಯಲ್ಲಿ ಮ್ಯಾಪಿಂಗ್ ಮಾಡಿದತರಗತಿವಾರು ಮತ್ತು ವಿಷಯವಾರು ಕಲಿಕಾಂಶಗಳಿಗೆ ಆದ್ಯತೆಯನ್ನುನೀಡತಕ್ಕದ್ದು.ಈಗಾಗಲೇ ನಲಿಕಲಿ ಬೋಧನಾ ಪದ್ಧತಿಯಅನುಷ್ಠಾನದಲ್ಲಿ ತಿಳಿಸಿದಂತೆಯೇ, ಮೌಲ್ಯಮಾಪನದಅನುಸರಣೆಯಕ್ರಮವನ್ನು ಮತ್ತುವಿದ್ಯಾರ್ಥಿವಾರು, ತರಗತಿವಾರುದಾಖಲೆಯ ನಿರ್ವಹಣೆಯನ್ನುಹಾಗೂ ಅಭ್ಯಾಸದ ಹಾಳೆಗಳ ಬಳಕೆಯ ಕ್ರಮವನ್ನುಸಹ ಸದರಿ ವ್ಯವಸ್ಥೆಯಲ್ಲಿಕಡ್ಡಾಯವಾಗಿಅನುಸರಿಸತಕ್ಕದ್ದು.

**ಗಮನಕ್ಕೆ:** **ಕನ್ನಡ ಭಾಷಾಕಲಿಕೆಯ ತಂತ್ರಗಳಿಗೆ ಕುರಿತಂತೆ ನಲಿಕಲಿ ಪದ್ಧತಿಯಲ್ಲಿಕನ್ನಡ ಭಾಷೆಯ ಕಲಿಕೆಗೆ ಸಿದ್ಧಪಡಿಸಿದ ಅಭ್ಯಾಸದ ಹಾಳೆಗಳನ್ನು ಸಹ ಇಲ್ಲಿನ ವ್ಯವಸ್ಥೆಯಲ್ಲಿಕಲಿಯುತ್ತಿರುವಎಲ್ಲಾ ಮಕ್ಕಳಿಗೂ ಬಳಸಿಕೊಳ್ಳತಕ್ಕದ್ದು.**

**4 ರಿಂದ 10 ನೇ ತರಗತಿಗಳಿಗೆ ಸೇತುಬಂಧ ಶಿಕ್ಷಣದ ಅನುಷ್ಠಾನ ಕಾರ್ಯತಂತ್ರಗಳು.**

- 4 ರಿಂದ 10ನೇ ತರಗತಿಗಳ ಕನ್ನಡ, ಆಂಗ್ಲ, ಮರಾಠಿ ಮತ್ತು ಉರ್ದು ಮಾಧ್ಯಮದ ವಿಷಯಾವಾರು ಸೇತುಬಂಧ ಸಾಹಿತ್ಯ ಸಿದ್ಧಪಡಿಸಲಾಗಿದ್ದು ಡಿ.ಎಸ್.ಇ.ಆರ್.ಟಿ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗುವುದು.
- ಮಕ್ಕಳ ವಯೋಮಾನ ಮತ್ತು ತರಗತಿಗೆ ಅನುಗುಣವಾಗಿ ಕಲಿಕಾಮಟ್ಟ ಹಾಗೂ ಸಾಮರ್ಥ್ಯಗಳನ್ನು ಗುರುತಿಸಿ ಮುಂದಿನ ಕಲಿಕೆಗೆ ಸಿದ್ಧಗೊಳಿಸಲು; ಕಲಿತಿರುವ ಮತ್ತು ಕಲಿಯುತ್ತಿರುವ ಪರಿಕಲ್ಪನೆಗಳ ಅಂತರದ ನಡುವೆ ಸಹಸಂಬಂಧ ಕಲ್ಪಿಸುವುದು ಸೇತುಬಂಧ ಶಿಕ್ಷಣದ ಮೂಲ ಉದ್ದೇಶ. ಈ ನಿಟ್ಟಿನಲ್ಲಿಹಿಂದಿನ ತರಗತಿ ಮತ್ತು ಆಯಾ ತರಗತಿಯ ಅಪೇಕ್ಷಿತ ಕಲಿಕಾಫಲಗಳನ್ನು ಪರಿಶೀಲಿಸಿ,ಪ್ರಸ್ತುತ ಸೇತುಬಂಧ ಶಿಕ್ಷಣಕ್ಕೆ 10 ರಿಂದ 12

ಅಪೇಕ್ಷಿತ ಕಲಿಕಾಫಲಗಳನ್ನು ಗುರುತಿಸಲಾಗಿದೆ. ಗುರುತಿಸಲಾದ ಅಪೇಕ್ಷಿತ ಕಲಿಕಾಫಲಗಳಿಗೆ ಕಲಿಕಾಂಶಗಳನ್ನು ಪಟ್ಟಿ ಮಾಡಲಾಗಿದೆ.

- ಪಟ್ಟಿ ಮಾಡಿದಂತಹ ಕಲಿಕಾಂಶಗಳಿಗೆ ಬೋಧನಾ ಪ್ರಕ್ರಿಯೆಯನ್ನು ಅನುಕೂಲಿಸಲು ಚಟುವಟಿಕೆ ಆಧಾರಿತವಾಗಿಕಲಿಕಾ ಕಾರ್ಯತಂತ್ರಗಳನ್ನು ರೂಪಿಸಲಾಗಿದೆ ಮತ್ತು ಈ ಚಟುವಟಿಕೆಗಳ ನಿರ್ವಹಣೆಗೆ ಮಾರ್ಗಸೂಚಿಯನ್ನು ನೀಡಲಾಗಿದೆ.
- ಸಾಹಿತ್ಯದಲ್ಲಿ ನೀಡಿರುವ ಚಟುವಟಿಕೆಯನ್ನೇ ಬಳಸಬಹುದು ಅಥವಾ ತಮ್ಮ ಹಂತದಲ್ಲಿ ಸ್ಥಳೀಯ ಸನ್ನಿವೇಶಕ್ಕೆ ಮತ್ತು ಅಪೇಕ್ಷಿತ ಕಲಿಕಾ ಫಲಗಳಿಗೆ ಅನುಗುಣವಾಗಿ ಚಟುವಟಿಕೆಯನ್ನು ರೂಪಿಸಿಕೊಂಡು ಅನುಷ್ಠಾನಿಸಲು ಕ್ರಮವಹಿಸುವುದು.
- ಚಟುವಟಿಕೆಗಳನ್ನು ರೂಪಿಸುವಾಗ ಬೋಧನಾ-ಕಲಿಕಾ ಪ್ರಕ್ರಿಯೆಯಲ್ಲಿ ಮೌಲ್ಯಮಾಪನವನ್ನು ಅಂತರ್ಗತಗೊಳಿಸಲಾಗಿದ್ದು, ಶಿಕ್ಷಕರು ಮಕ್ಕಳ ಕಲಿಕಾ ಪ್ರಗತಿಯನ್ನು ನಿಯಮಿತವಾಗಿ ಕೃತಿಸಂಪುಟದಲ್ಲಿ ದಾಖಲಿಸುವುದು.
- ಉಲ್ಲೇಖಿತ ಸುತ್ತೋಲೆಯಲ್ಲಿ ತಿಳಿಸಿರುವಂತೆ ವಿದ್ಯಾರ್ಥಿಗಳಲ್ಲಿನ ಸಾಧನಗಳ ಲಭ್ಯತೆಗನುಗುಣವಾಗಿ ಪ್ರತಿ ವಿದ್ಯಾರ್ಥಿಗೆ ಕಲಿಕಾ ತಂತ್ರಗಳನ್ನು ರೂಪಿಸಿ ನಿರಂತರ ಕಲಿಕೆಯನ್ನು ಅನುಕೂಲಿಸಲು ಕ್ರಿಯಾ ಯೋಜನೆಯನ್ನು ರೂಪಿಸುವುದು ಅತ್ಯವಶ್ಯಕ.
- ಸೇತುಬಂಧ ಶಿಕ್ಷಣ ಪೂರ್ಣಗೊಂಡ ನಂತರದಲ್ಲಿ ಕಲಿಕೆಯನ್ನು ಖಾತರಿಪಡಿಸಿಕೊಳ್ಳಲು ಮೌಲ್ಯಮಾಪನ ಕೈಗೊಳ್ಳುವುದು ಮತ್ತು ಮಕ್ಕಳಲ್ಲಿ ಅಪೇಕ್ಷಿತ ಕಲಿಕೆಯ ಫಲಗಳ ಕಲಿಕೆಯಾಗಿದೆ ಎಂಬುದನ್ನು ಒಟ್ಟಾರೆಯಾಗಿ ಕೃತಿ ಸಂಪುಟದಲ್ಲಿ ದಾಖಲಿಸುವುದು.
- ಸೇತುಬಂಧ ಶಿಕ್ಷಣಕ್ಕೆ ಪ್ರತಿ ವಿದ್ಯಾರ್ಥಿಗೆ ಲಭ್ಯವಿರುವ ಸಾಧನಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳನ್ನು ಮೂರು ಗುಂಪುಗಳಲ್ಲಿ ವಿಂಗಡಿಸುವುದು. ಆಯಾ ಗುಂಪಿನ ಅಗತ್ಯಕ್ಕನುಗುಣವಾಗಿ ನಿರ್ವಹಿಸಬೇಕಾದ ಚಟುವಟಿಕೆಗಳನ್ನು/ಸಿದ್ದತೆಗಳನ್ನುದಾಖಲಿಸಿಕೊಳ್ಳಲುನಮೂನೆ ಕೆಳಕಂಡಂತಿದೆ. ನಮೂನೆಯಲ್ಲಿ ವಿದ್ಯಾರ್ಥಿಗಳ ಗುಂಪನ್ನು ನಿರ್ಧರಿಸುವಾಗ ಆನ್‌ಲೈನ್, ಆಫ್‌ಲೈನ್ ಮತ್ತು ಮಿಶ್ರಿತವಿದ್ಯಾರ್ಥಿಗಳ ಗುಂಪುಗಳನ್ನಾಗಿ ಮಾಡಿಕೊಳ್ಳುವುದು. ಗುಂಪಿನ ಸ್ವರೂಪಕ್ಕೆ ಅನುಗುಣವಾಗಿ ಆನ್‌ಲೈನ್ ಅಥವಾ ಆಫ್‌ಲೈನ್‌ನಲ್ಲಿ ಶಿಕ್ಷಕರು ಮಾಡಿಕೊಳ್ಳಬೇಕಾದ ತಯಾರಿ ಕಾರ್ಯವನ್ನು ಗುರುತಿಸಿಕೊಳ್ಳುವುದು. ಆಯಾ ಗುಂಪಿಗೆ ನೀಡಿದ ಕಲಿಕಾ ಅನುಭವಗಳನ್ನು ಆಧರಿಸಿ ಆನ್‌ಲೈನ್ ಅಥವಾ ಆಫ್‌ಲೈನ್ ಮಾದರಿಯಲ್ಲಿ ರಸಪ್ರಶ್ನೆ, ಲಿಖಿತ ಅಥವಾ ಮೌಖಿಕ ಪ್ರಶ್ನೋತ್ತರ (ನೇರ ಅಥವಾ ದೂರವಾಣಿ ಸಂಭಾಷಣೆ),ಸರಳ ಯೋಜನೆಗಳು, ಸಂಭಾಷಣೆ, ಸರಳ ಚಟುವಟಿಕೆಗಳು, ಅಭ್ಯಾಸ ಹಾಳೆಗಳನ್ನು ಪೂರ್ಣಗೊಳಿಸಿರುವುದು, ಗೃಹಪಾಠ ಹಾಗೂ ಇನ್ನಿತರ ಚಟುವಟಿಕೆಗಳನ್ನು ಮೌಲ್ಯಮಾಪನ ಮಾಡುವುದು. ಇವುಗಳ ಶೀರ್ಷಿಕೆಗಳನ್ನು ನಮೂನೆಯಲ್ಲಿ ದಾಖಲಿಸಿಕೊಳುವುದು.ಪರ್ಯಾಯ ಬೋಧನಾ-ಕಲಿಕಾ ತಂತ್ರಗಳನ್ನು ಗುಂಪುವಾರು ಸ್ಪಷ್ಟವಾಗಿ ಗುರುತಿಸಿ ಪ್ರತ್ಯೇಕ ನಮೂನೆಗಳಲ್ಲಿ ದಾಖಲಿಸಿಕೊಳ್ಳುವುದು.

**ಶಿಕ್ಷಕರು ನಿರ್ವಹಿಸಬೇಕಾದ ಮೌಲ್ಯ ಮಾಪನ ನಮೂನೆ:**

ಶಿಕ್ಷಕರ ಹೆಸರು:

ತರಗತಿ: ವಿಷಯ:

ಪರ್ಯಾಯ ಬೋಧನಾ-ಕಲಿಕಾ ತಂತ್ರಗಳು: (ಗುಂಪು-1, ಗುಂಪು-2, ಗುಂಪು-3)

| ಕ್ರ ಸಂ | ಅಪೇಕ್ಷಿತ ಕಲಿಕಾ ಫಲ | ಕಲಿಕಾಂಶ | ಶಾಲಾ ಹಂತದಲ್ಲಿ ಶಿಕ್ಷಕರು ಮಾಡಿಕೊಂಡ ತಯಾರಿ | | | ಮೌಲ್ಯಮಾಪನಾ ತಂತ್ರ ಮತ್ತು ಸಾಧನಗಳು |
|---|---|---|---|---|---|---|
| | | | ಆಫ್‌ಲೈನ್ | ಆನ್‌ಲೈನ್ | ಸಮ್ಮಿಶ್ರ | |
| 01 | | | | | | |
| 02 | | | | | | |
| 03 | | | | | | |

❖ ಸೇತುಬಂಧ ಶಿಕ್ಷಣ ಪೂರ್ಣಗೊಂಡ ನಂತರವು ವಿದ್ಯಾರ್ಥಿಗಳಲ್ಲಿ ಇನ್ನು ಕೆಲ ಸಾಮರ್ಥ್ಯಗಳು ಗಳಿಕೆ ಆಗಿರದಿದ್ದಲ್ಲಿ ಅಂತಹವರನ್ನು ಗಮನಿಸಿ ಆಯಾ ತರಗತಿ ಪಠ್ಯ ಬೋಧನಾ ಸಂದರ್ಭದಲ್ಲಿ ಪೂರ್ವ ಸಿದ್ಧತಾ ಚಟುವಟಿಕೆಗಳನ್ನು ನೀಡುವಾಗ ಸದರಿ ಸಾಮರ್ಥ್ಯಗಳಿಗೆ ವಿಶೇಷ ಆದ್ಯತೆ ನೀಡಿ ಕಲಿಕೆಯನ್ನು ಅನುಕೂಲಿಸುವುದು.

**ಮೇಲ್ವಿಚಾರಣೆ ಮತ್ತು ಉಸ್ತುವಾರಿ:**

❖ ಶಾಲಾ ಹಂತದಲ್ಲಿ ಮುಖ್ಯ ಶಿಕ್ಷಕರು ಶಾಲಾ ಅನುದಾನ ಬಳಸಿ ಸೇತುಬಂಧ ಸಾಹಿತ್ಯದ ಪ್ರತಿಗಳನ್ನು ಪ್ರಿಂಟ್ ಮಾಡಿಕೊಂಡು ಎಲ್ಲಾ ಶಿಕ್ಷಕರಿಗೆ ತರಗತಿ ಮತ್ತು ವಿಷಯಕ್ಕನುಸಾರ ವಿತರಿಸುವುದು. ಎಲ್ಲಾ ಶಿಕ್ಷಕರು ಸೇತುಬಂಧ ಸಾಹಿತ್ಯ ಹೊಂದಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು ಮತ್ತು ಶಿಕ್ಷಕರು ವಿದ್ಯಾರ್ಥಿಗಳ ಲಭ್ಯತೆಗೆ ಅನುಗುಣವಾಗಿ ಕ್ರಿಯಾಯೋಜನೆ ರೂಪಿಸಲು ಅಗತ್ಯ ಮಾರ್ಗದರ್ಶನ ನೀಡುವುದು.

❖ ಸೇತುಬಂಧ ಶಿಕ್ಷಣದಲ್ಲಿ ಮಕ್ಕಳ ಕಲಿಕಾ ಪ್ರಗತಿಯನ್ನು ಕೃತಿಸಂಪುಟದಲ್ಲಿ ಶಿಕ್ಷಕರು ದಾಖಲಿಸುತ್ತಿರುವ ಬಗ್ಗೆ ಮುಖ್ಯ ಶಿಕ್ಷಕರು ಖಾತ್ರಿಪಡಿಸಿಕೊಳ್ಳುವುದು.

❖ ತಾಲ್ಲೂಕು ಮತ್ತು ಜಿಲ್ಲಾ ಹಂತದ ಕ್ಷೇತ್ರ ಉಸ್ತುವಾರಿ ಅಧಿಕಾರಿಗಳು ನಿಯಮಿತವಾಗಿ ಶಾಲಾ ಭೇಟಿ ಮಾಡಿ ಸೇತುಬಂಧ ಶಿಕ್ಷಣದ ಪ್ರಗತಿ ಪರಿಶೀಲಿಸುವುದು ಮತ್ತು ಅಗತ್ಯ ಮಾರ್ಗದರ್ಶನ ನೀಡುವುದು.

❖ ಜಿಲ್ಲಾ ನೋಡಲ್ ಅಧಿಕಾರಿಗಳು ಶಾಲಾ ಭೇಟಿ ಹಾಗೂ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಸೇತುಬಂಧ ಶಿಕ್ಷಣ ಅನುಷ್ಠಾನದ ಪ್ರಗತಿ ಪರಿಶೀಲನೆ ಮಾಡುವುದು.

❖ ಉಪನಿರ್ದೇಶಕರು(ಅಭಿವೃದ್ಧಿ) ಇವರು ತಮ್ಮ ಜಿಲ್ಲೆಯ ಯಾವುದೇ ಮಗು ಶಿಕ್ಷಣದಿಂದ ವಂಚಿತವಾಗದಂತೆ ಶಾಲಾ ಹಂತದಲ್ಲಿ ಕ್ರಮವಹಿಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು ಹಾಗೂ ಸೇತುಬಂಧ ಶಿಕ್ಷಣದ ಪ್ರಗತಿಯನ್ನು ಬ್ಲಾಕ್ ಹಂತ ಮತ್ತು ಜಿಲ್ಲಾ ಹಂತದಲ್ಲಿ 10 ದಿನಗಳಿಗೆ ಒಮ್ಮೆ ವಿಷಯವಾರು, ತರಗತಿವಾರು ಪ್ರತ್ಯೇಕ ನಮೂನೆಗಳನ್ನು ನಿರ್ವಹಿಸಿ ಕ್ರೂಢೀಕೃತ ನಮೂನೆಯನ್ನು ಮಾತ್ರ ಡಿ.ಎಸ್.ಇ.ಆರ್.ಟಿ ಕಛೇರಿಗೆ ಸಲ್ಲಿಸುವುದು.

❖ ಬ್ಲಾಕ್ ಹೆಸರು: ಜಿಲ್ಲೆ:

❖ ಕಿ.ಪ್ರಾ ಶಾಲೆಗಳ ಸಂಖ್ಯೆ :ಹಿ.ಪ್ರಾ ಶಾಲೆಗಳ ಸಂಖ್ಯೆ :

❖ ಪ್ರೌಢ ಶಾಲೆಗಳ ಸಂಖ್ಯೆ :ಒಟ್ಟು ಶಾಲೆಗಳ ಸಂಖ್ಯೆ :

| ತರಗತಿ | ಗುಂಪುವಾರು ಸೇತುಬಂಧ ಶಿಕ್ಷಣ ಪಡೆಯುತ್ತಿರುವ ಮಕ್ಕಳ ಸಂಖ್ಯೆ | | | | ಅಪೇಕ್ಷಿತ ಕಲಿಕಾಫಲಗಳನ್ನು ಗಳಿಸಿದ ವಿದ್ಯಾರ್ಥಿಗಳ ಸಂಖ್ಯೆ (ಎಲ್ಲಾ ವಿಷಯಗಳನ್ನು ಸೇರಿ) | | | |
|---|---|---|---|---|---|---|---|---|
| | ಗುಂಪು-1 (ಆನ್‌ಲೈನ್) | ಗುಂಪು-2(ಆಫ್‌ಲೈನ್) | ಗುಂಪು-3(ಮಿಶ್ರಿತ) | ಒಟ್ಟು | ಗುಂಪು-1 (ಆನ್‌ಲೈನ್) | ಗುಂಪು-2(ಆಫ್‌ಲೈನ್) | ಗುಂಪು-3(ಮಿಶ್ರಿತ) | ಒಟ್ಟು |
| 4 | | | | | | | | |
| 5 | | | | | | | | |
| 6 | | | | | | | | |
| 7 | | | | | | | | |
| 8 | | | | | | | | |
| 9 | | | | | | | | |
| 10 | | | | | | | | |
| ಒಟ್ಟು | | | | | | | | |

ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಹಿ

ಜಿಲ್ಲಾ ಹಂತದಿಂದ ಸಲ್ಲಿಸಬೇಕಾದ ನಮೂನೆ :

ಜಿಲ್ಲೆಯ ಹೆಸರು:

ಕಿ.ಪ್ರಾ ಶಾಲೆಗಳ ಸಂಖ್ಯೆ: ಹಿ.ಪ್ರಾ ಶಾಲೆಗಳ ಸಂಖ್ಯೆ :

ಪ್ರೌಢ ಶಾಲೆಗಳ ಸಂಖ್ಯೆ : ಒಟ್ಟು ಶಾಲೆಗಳ ಸಂಖ್ಯೆ:

| ತರಗತಿ | ಗುಂಪುವಾರು ಸೇತುಬಂಧ ಶಿಕ್ಷಣ ಪಡೆಯುತ್ತಿರುವ ಮಕ್ಕಳ ಸಂಖ್ಯೆ | | | | ಅಪೇಕ್ಷಿತ ಕಲಿಕಾಫಲಗಳನ್ನು ಗಳಿಸಿದ ವಿದ್ಯಾರ್ಥಿಗಳ ಸಂಖ್ಯೆ (ಎಲ್ಲಾ ವಿಷಯಗಳನ್ನು ಸೇರಿ) | | | |
|---|---|---|---|---|---|---|---|---|
| | ಗುಂಪು–1 (ಆನ್‌ಲೈನ್) | ಗುಂಪು–2(ಆಫ್‌ಲೈನ್) | ಗುಂಪು–3(ಮಿಶ್ರಿತ) | ಒಟ್ಟು | ಗುಂಪು–1 (ಆನ್‌ಲೈನ್) | ಗುಂಪು–2 (ಆಫ್‌ಲೈನ್) | ಗುಂಪು–3(ಮಿಶ್ರಿತ) | ಒಟ್ಟು |
| 4 | | | | | | | | |
| 5 | | | | | | | | |
| 6 | | | | | | | | |
| 7 | | | | | | | | |
| 8 | | | | | | | | |
| 9 | | | | | | | | |
| 10 | | | | | | | | |
| ಒಟ್ಟು | | | | | | | | |

ಉಪನಿರ್ದೇಶಕರು (ಅಬಿವೃದ್ಧಿ)

❖ ವಿಶೇಷ ಸೂಚನೆ: ಕೋವಿಡ್–19ರ ಹಿನ್ನಲೆಯಲ್ಲಿ ಕಾಲಕಾಲಕ್ಕೆ ಸರ್ಕಾರ, ಇಲಾಖೆ ಮತ್ತು ಜಿಲ್ಲಾಡಳಿತಗಳು ನೀಡುವ ಸೂಚನೆಗಳನ್ನು ಮತ್ತು ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸುವುದು.

(ವಿ. ಅನ್ಬುಕುಮಾರ್)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ)ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಉಪನಿರ್ದೇಶಕರು (ಆಡಳಿತ) ರವರ ಮೂಲಕ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಅಗತ್ಯ ಕ್ರಮಕ್ಕಾಗಿ

ಪ್ರತಿಯನ್ನು:

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ , ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
4. ಅಪರ ಆಯುಕ್ತರು, ಸಾ.ಶಿ.ಇಧಾರವಾಡ ಆಯುಕ್ತಾಲಯ ಮತ್ತು ಸಾ.ಶಿ.ಇ ಕಲಬುರಗಿ ಆಯುಕ್ತಾಲಯ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5. ನಿರ್ದೇಶಕರು, ಪ್ರೌಢ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮಾಹಿತಿಗಾಗಿ.
6. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮಾಹಿತಿಗಾಗಿ.
7. ನಿರ್ದೇಶಕರು, ಪ್ರೌಢ ಶಿಕ್ಷಣ ಪರೀಕ್ಷೆ ಮಂಡಳಿ, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮಾಹಿತಿಗಾಗಿ.
8. ನಿರ್ದೇಶಕರು (ಗುಣಮಟ್ಟ) ಎಸ್.ಎಸ್.ಕೆ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮಾಹಿತಿಗಾಗಿ.
9. ನಿರ್ದೇಶಕರು (ಇತರೆ ಪರೀಕ್ಷೆಗಳು), ಪ್ರೌಢ ಶಿಕ್ಷಣ ಪರೀಕ್ಷೆ ಮಂಡಳಿ, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮಾಹಿತಿಗಾಗಿ.
10. ನಿರ್ದೇಶಕರು ಡಿ.ಎಸ್.ಇ.ಆರ್.ಟಿ, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮಾಹಿತಿಗಾಗಿ.
11. ಕಛೇರಿ ಪ್ರತಿ.